# ಕನ್ನಡ ಅಧಿಕಾರದ ಭಾಷೆಯೋ? ಆಡಳಿತ ಭಾಷೆಯೋ?



**ವಸುಂಧರಾ ಕದಲೂರು**

ಕಲೆ: ಜಬೀವುಲ್ಲಾ ಎಂ. ಅಸದ್

ಭಾಷೆಯೊಂದರ ಬಳಕೆಯ ಸ್ವರೂಪ ಮತ್ತು ಸಾಧ್ಯತೆಗಳ ಕುರಿತು ಯೋಚಿಸುವಾಗ 'ಅಧಿಕಾರದ ಭಾಷೆ' ಎಂದು ಹೇಳುತ್ತೇವೆ. ಭಾಷೆಯೊಂದು ಸರ್ಕಾರದ ಪರಿಭಾಷೆಯಲ್ಲಿ ಪ್ರಯೋಗಗೊಳ್ಳುವ ಸಾಧ್ಯತೆಯೇ 'ಅಧಿಕಾರದ ಭಾಷೆ'. ಸರ್ಕಾರ ಮಾತ್ರವಲ್ಲದೆ, ಒಡೆಯ–ನೌಕರ ಎನ್ನುವ ಶ್ರೇಣಿಯುಳ್ಳ ಎಲ್ಲೆಡೆ ಅಧಿಕಾರದ ಭಾಷೆ ಬಳಕೆಯಾಗುವ ಸಾಧ್ಯತೆಯಿರುತ್ತದೆ. ಯಾಜಮಾನ್ಯ ನೆಲೆಯಲ್ಲಿ ಕುಟುಂಬದೊಳಗೆ, ವಿಶೇಷವಾಗಿ ಹೆಣ್ಣಿನ ಕುರಿತ ಗಂಡಿನ ಭಾಷೆಯೂ 'ಅಧಿಕಾರದ ಭಾಷೆ'ಯೇ ಆಗಿದೆ. ಹೀಗೆ, ಅಧಿಕಾರದ ಭಾಷೆಗೆ ಹಲವು ಸ್ವರೂಪಗಳಿದ್ದರೂ, ಮುಖ್ಯವಾಗಿ ಅದನ್ನು ಸರ್ಕಾರಕ್ಕೆ ಸಂಬಂಧಿಸಿದಂತೆ ಹೆಚ್ಚು ಬಳಸುತ್ತೇವೆ. ಆದರೆ, ಸರ್ಕಾರಕ್ಕೆ ಸಂಬಂಧಿಸಿದಂತೆಯೂ 'ಅಧಿಕಾರದ ಭಾಷೆ' ಎನ್ನುವ ಪದ ಸರಿಯಾದ ಬಳಕೆಯಲ್ಲ, 'ಆಡಳಿತ ಭಾಷೆ' ಎನ್ನುವುದೇ ಸರಿ ಎನ್ನುವ ವಸುಂಧರಾ ಕದಲೂರು ಅವರ ಈ ಬರಹ, 'ಆಡಳಿತ ಭಾಷೆ'ಯಾಗಿ ಕನ್ನಡ ಸಶಕ್ತವಾಗಿ ರೂಪುಗೊಂಡಿರುವ ಬಗೆಯನ್ನು ಚಿತ್ರಿಸುತ್ತದೆ.